# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1638 |
| ಸದಸ್ಯರ ಹೆಸರು | : | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11.03.2022. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ರಾಮೀಣ ಭಾಗದ ಮನೆಗಳಿಗೆ ನಂಬರ್ ಪಟ್ಟಿ ಅಂಟಿಸುವುದನ್ನು ಸರ್ಕಾರ ಅಥವಾ ಖಾಸಗಿಯವರಿಗೆ ನೀಡಲಾಗಿದೆಯೇ; ನೀಡಿದ್ದಲ್ಲಿ, ಯಾವ ಕಾರಣಕ್ಕೆ ಈ ಚೀಟಿಯನ್ನು ಅಂಟಿಸುವ ಯೋಜನೆಯನ್ನು ಮಾಡಲಾಗಿದೆ; (ವಿವರ ನೀಡುವುದು) | ಇಲ್ಲ. |
| (ಆ) | ರಾಜ್ಯದ ಹಲವು ಜಿಲ್ಲೆಗಳಲ್ಲಿ ಖಾಸಗಿ ಕಂಪನಿಗಳು ಹಾಗೂ ಎಸ್.ಬಿ ನಂಬರಿಂಗ್ ವರ್ಕ್ ಲಿ. ಎಂಬ ಕಂಪನಿಯ ಸಿಬ್ಬಂದಿಗಳು ಗ್ರಾಮೀಣ ಭಾಗದ ಮನೆಗಳಿಗೆ ತೆರಳಿ ಕೈ ಬರಹದ ಚೀಟಿಗಳನ್ನು 50 ರೂಗಳನ್ನು ಪ್ರತಿ ಮನೆಗಳಿಂದ ಪಡೆದು ಅಂಟಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದು ಸರ್ಕಾರದ ಯೋಜನೆಯೇ; ಈ ರೀತಿ ಚೀಟಿಯನ್ನು ಅಂಟಿಸಲು ಹಣ ನಿಗಧಿ ಮಾಡಿರುವುದು ಯಾರು; ಇದಕ್ಕೆ ಕಾರಣವೇನು; (ಮಾಹಿತಿ ಹಾಗೂ ಕಾರಣ ನೀಡುವುದು) | ಬಂದಿಲ್ಲ. |
| (ಇ) | ಈ ಯೋಜನೆ ಸರ್ಕಾರದಲ್ಲಿ ಇಲ್ಲವಾದಲ್ಲಿ, ಈ ರೀತಿ ಚೀಟಿ ಅಂಟಿಸುವ ಕಾರ್ಯವನ್ನು ಮಾಡುತ್ತಿರುವ ಖಾಸಗಿ ಕಂಪನಿಯ ಮೇಲೆ ಪೊಲೀಸ್ ಕೇಸನ್ನು ಮಾಡಲು ಸರ್ಕಾರದ ಕ್ರಮಗಳೇನು; ಇದರಲ್ಲಿ ಸ್ಥಳೀಯ ಅಧಿಕಾರಿಗಳು ಭಾಗಿಯಾಗಿದ್ದಲ್ಲಿ ಅವರುಗಳ ಮೇಲೆ ಕಠಿಣ ಕ್ರಮಗಳನ್ನು ಸರ್ಕಾರ ಕೈಗೊಳ್ಳುವುದೇ? (ವಿವರ ನೀಡುವುದು) | ಒಂದು ವೇಳೆ ಗ್ರಾಮೀಣ ಭಾಗದ ಮನೆಗಳಿಗೆ ನಂಬರ್ ಪಟ್ಟಿ ಅಂಟಿಸುವ ಕಾರ್ಯವನ್ನು ಮಾಡುತ್ತಿರುವ ಖಾಸಗಿ ಕಂಪನಿಯ ಮೇಲೆ ಪೊಲೀಸ್ ಕೇಸನ್ನು ಸ್ಥಳೀಯವಾಗಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ದಾಖಲಿಸಬಹುದಾಗಿದೆ.<br><br>ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಕರ್ನಾಟಕ ಸಿವಿಲ್ ಸೇವಾ (ಸಿಸಿಎ) ನಿಯಮಗಳು, 1957 ರನ್ವಯ ಶಿಸ್ತು ಕ್ರಮ ಜರುಗಿಸಬಹುದಾಗಿದೆ. |

ಸಂಖ್ಯೆ: ಗ್ರಾಅಪ 94 ಗ್ರಾಪಂಅ 2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.